ಪ್ರಜಾವಾಣಿ

# ಸಿಇಟಿ: ಪ್ರತೀಕ್ ನಾಯಕ್ ಪ್ರಥಮ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಫಲಿತಾಂಶ ಮಂಗಳವಾರ ಪ್ರಕಟವಾಗಿದ್ದು, ಮಂಗಳೂರಿನ ಪ್ರತೀಕ್ ಎಸ್. ನಾಯಕ್ ಎಂಜಿನಿಯರಿಂಗ್ ವಿಭಾಗದಲ್ಲಿ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ.

ಎಕ್ಸ್‌ಪರ್ಟ್ ಪಿಯು ಕಾಲೇಜಿನ ಪ್ರತೀಕ್‌ಗೆ ಬಿ- ಫಾರ್ಮಾ ಮತ್ತು ಫಾರ್ಮಾ-ಡಿ ವಿಭಾಗದಲ್ಲೂ ಮೊದಲ ರ‍್ಯಾಂಕ್ ಬಂದಿದೆ. ಭಾರತೀಯ ವೈದ್ಯ ಪದ್ಧತಿ, ಹೋಮಿಯೋಪಥಿ ಹಾಗೂ ಬಿ.ಎಸ್ಸಿ (ಕೃಷಿ) ವಿಭಾಗದಲ್ಲಿ

## ಎಂಜಿನಿಯರಿಂಗ್

**ಪ್ರತೀಕ್ ಎಸ್. ನಾಯಕ್,** ಮಂಗಳೂರು
**ಸುಮಂತ್ ಆರ್. ಹೆಗಡೆ,** ಬೆಂಗಳೂರು
**ಎಸ್. ಅನಿರುದ್ಧ,** ಬೆಂಗಳೂರು
**ಡಿ.ಟೋನಿ ಫೆಡ್ರಿಕ್,** ಬೆಂಗಳೂರು
**ಸಿ.ವಿ. ಸಿದ್ಧಾರ್ಥ,** ಬೆಂಗಳೂರು

ಜೈನ್ ಪಿಯು ಕಾಲೇಜಿನ ರಕ್ಷಿತಾ ರಮೇಶ್ ಮೊದಲ ರ‍್ಯಾಂಕ್ ಪಡೆದಿದ್ದಾರೆ. ಪಶು ವೈದ್ಯ ವಿಜ್ಞಾನ ವಿಭಾಗದಲ್ಲಿ ಇವರಿಗೆ ಎರಡನೇ ರ‍್ಯಾಂಕ್ ದೊರೆತಿದೆ.

ಪಶು ವೈದ್ಯ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ ಟಾಪರ್ ಆಗಿರುವ ದಾವಣಗೆರೆ



ಪ್ರತೀಕ್



ವಿಕ್ಟರ್ ಥಾಮಸ್

ವೈಷ್ಣವಿ ಚೇತನ ಪಿಯು ಕಾಲೇಜಿನ ವಿಕ್ಟರ್ ವಿ.ಥಾಮಸ್, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪಥಿ ವಿಭಾಗದಲ್ಲಿ ರಾಜ್ಯಕ್ಕೆ ಎರಡನೇ ರ‍್ಯಾಂಕ್ ಪಡೆದಿದ್ದಾರೆ.

ಬೆಂಗಳೂರು ವಿವಿಎಸ್ ಸರ್ದಾರ್ ಪಿಯು ಕಾಲೇಜಿನ ಸುಮಂತ್ ಆರ್. ಹೆಗಡೆ ಎಂಜಿನಿಯರಿಂಗ್ ಹಾಗೂ ಬಿ-ಫಾರ್ಮಾ, ಫಾರ್ಮಾ-ಡಿನಲ್ಲಿ ಎರಡನೇ ರ‍್ಯಾಂಕ್ ಗಳಿಸಿದ್ದಾರೆ.

**ವೈದ್ಯಕೀಯ ರ‍್ಯಾಂಕ್ ಇಲ್ಲ:** ಪ್ರತಿ ಬಾರಿ ಸಿಇಟಿ ಫಲಿತಾಂಶದಲ್ಲಿ ವೈದ್ಯಕೀಯ ರ‍್ಯಾಂಕ್ ಸಹ ಇರುತ್ತಿತ್ತು. ಆದರೆ, ಈ ಬಾರಿ ನೀಟ್ ನಡೆದಿದ್ದರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ರ‍್ಯಾಂಕ್ ಪ್ರಕಟಿಸಿಲ್ಲ. ನೀಟ್ ಫಲಿತಾಂಶ ಪ್ರಕಟವಾದ ಬಳಿಕ ರ‍್ಯಾಂಕ್ ಪ್ರಕಟಿಸುವುದಾಗಿ ಸ್ಪಷ್ಟಪಡಿಸಿದೆ.

4ನೇ ಪುಟ ನೋಡಿ